# ಆರಂಭಿಕ ಸಾಕ್ಷರತೆಯ ಪರಿಕಲ್ಪನಾತ್ಮಕ ಚೌಕಟ್ಟಿನ ಕಡೆಗೆ: ಸಮತೋಲಿತ ಮತ್ತು ಸಾಮಾಜಿಕವಾಗಿ ಸೂಕ್ಷ್ಮವೆನಿಸಬಲ್ಲ ವಿಧಾನ

Towards a Conceptual Framework for Early Literacy: A Balanced and Socially Sensitive Approach


ಕೀರ್ತಿ ಜಯರಾಮ್

ಆರಂಭಿಕ ಸಾಕ್ಷರತೆ ಪ್ರೋತ್ಸಾಹಕ ಸಂಸ್ಥೆ, ದೆಹಲಿ


## ಪೀಠಿಕೆ

ಸ್ವಾತಂತ್ರ್ಯ ಗಳಿಸಿದ 60 ವರ್ಷಗಳ ನಂತರವೂ, ಭಾರತದಲ್ಲಿ ಶಾಲೆಗೆ ಹೋಗುವ ಅನೇಕ ಮಕ್ಕಳು ಉರುಹೊಡೆದು ಕಲಿಯುವುದನ್ನು ನೋಡುತ್ತೇವೆ. ಹಾಗಾಗಿ, ವಾಸ್ತವದಲ್ಲಿ ಸ್ವತಂತ್ರ ಭಾರತದ ಈ ವಿದ್ಯಾರ್ಥಿಗಳನ್ನು ಸ್ವತಂತ್ರವಾಗಿ ಓದು-ಬರಹದಲ್ಲಿ ತೊಡಗಬಲ್ಲ ವಿದ್ಯಾರ್ಥಿಗಳೆಂದು ಪರಿಗಣಿಸಲಾಗುವುದಿಲ್ಲ. ಮನೆಯಲ್ಲಿಓದಲು ಬರೆಯಲು ಅಗತ್ಯ ಬೆಂಬಲವಿಲ್ಲದ ಮಕ್ಕಳ ವಿಶೇಷ ಅಗತ್ಯಗಳನ್ನು ಮತ್ತು ತಮ್ಮ ಮನೆ ಹಾಗೂ ಸಾಮಾಜಿಕ ಜಗತ್ತುಗಳಲ್ಲಿನ ಮೌಖಿಕ ಸಂಸ್ಕೃತಿಯಿಂದ ಶಾಲೆಯ ಮುದ್ರಣ ಆಧಾರಿತ ಸಂಸ್ಕೃತಿಗೆ ಸುಗಮವಾಗಿ, ಅರ್ಥಪೂರ್ಣವಾಗಿ ಅವಸ್ಥಾಂತರಗೊಳ್ಳಬೇಕಾದ ಮಕ್ಕಳ ಅವಶ್ಯಕತೆಯನ್ನು ಗಮನದಲ್ಲಿ ಇರಿಸಿಕೊಂಡು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಆರಂಭಿಕ ಸಾಕ್ಷರತೆಗಾಗಿ ಸಮತೋಲಿತ ಮತ್ತು ಸಾಮಾಜಿಕವಾಗಿ ಸೂಕ್ಷ್ಮವೆನಿಸಬಲ್ಲ ಪರಿಕಲ್ಪನಾತ್ಮಕ ಚೌಕಟ್ಟನ್ನು ಲೇಖನವು ಪ್ರಸ್ತಾಪಿಸುತ್ತದೆ. ಈ ಚೌಕಟ್ಟನ್ನು, ಸಂಪನ್ಮೂಲಗಳ ಕೊರತೆಯಿರುವ ಶಾಲೆಗಳೊಂದಿಗಿನ ನಿರಂತರ ಒಡನಾಟ, ಪ್ರಸ್ತುತ ಲಭ್ಯವಿರುವ ಸಾಹಿತ್ಯದ ಒಡನಾಟದಿಂದ ಪಡೆದುಕೊಂಡ ಒಳನೋಟಗಳು ಮತ್ತು ಭಾರತದಲ್ಲಿ ಜಾರಿಗೆ ತರಲಾಗಿರುವಆರಂಭಿಕ ಸಾಕ್ಷರತೆಗೆ ಸಂಬಂಧಿಸಿದ ಪ್ರಯೋಗಶೀಲವೂ, ನಾವೀನ್ಯಪೂರ್ಣವೂ ಆದ ಕಾರ್ಯಕ್ರಮಗಳಿಂದ ರೂಪಿಸಲಾಗಿದೆ. ಈ ಲೇಖನವು ಮಕ್ಕಳಿಗೆ ಪುಸ್ತಕಗಳೊಂದಿಗೆ ಅರ್ಥಪೂರ್ಣವಾಗಿ ಮತ್ತು ಸಾಮಾಜಿಕವಾಗಿ ಸೂಕ್ತವೆನಿಸುವ ರೀತಿಯಲ್ಲಿ ತೊಡಗಬೇಕಾದ ಅಗತ್ಯವಿದೆ ಎಂಬ ಕಲ್ಪನೆಯನ್ನು ಆಧರಿಸಿದೆಯಲ್ಲದೆ, ಮುದ್ರಣ ಆಧಾರಿತ ವಿವಿಧ ಓದುವಿಕೆ ಮತ್ತು ಬರವಣಿಗೆಯ ಚಟುವಟಿಕೆಗಳೊಂದಿಗೆ ಸಕ್ರಿಯವಾಗಿ ಮತ್ತು ಉದ್ದೇಶಪೂರ್ವಕವಾಗಿ ತೊಡಗಿಸಿಕೊಳ್ಳಲು ಹಲವಾರು ಇತರ ಅವಕಾಶಗಳನ್ನು ಮಕ್ಕಳು ಹೊಂದಬೇಕೆಂಬ ಆಶಯದಿಂದ ಕೂಡಿದೆ. ಈ ಲೇಖನವು ತರಗತಿಗೆ ಹಾಜರಾಗುವ ಮಕ್ಕಳ ಆಡುಭಾಷೆಯ ಸಮೃದ್ಧ ಸಂಪನ್ಮೂಲ ಮತ್ತು ಮಕ್ಕಳ ನಿಜ ಜೀವನದ ಅನುಭವಗಳನ್ನು ಗುರುತಿಸುತ್ತದೆ. ಇದರ ಜೊತೆಗೆ, ಶಬ್ದಜ್ಞಾನ, ವರ್ಣಮಾಲೆಯ ಅರಿವು, ಶಬ್ದಸಂಪತ್ತು ಮತ್ತು ಅರ್ಥಗ್ರಹಿಕೆಯ ತಂತ್ರಗಳ ನಿಟ್ಟಿನಲ್ಲಿ, ಇದು ಸ್ಪಷ್ಟವಾದ ಮತ್ತು ಅಭಿವೃದ್ಧಿಗೆ ಸೂಕ್ತವಾದ ಕಲಿಕೆಯ ಅವಕಾಶವನ್ನು/ಬೋಧನೆಯನ್ನು ಒದಗಿಸುತ್ತದೆ.

## ಭಾರತೀಯ ಸಂದರ್ಭ

ಜಾಗತಿಕ ಮತ್ತು ಶಿಕ್ಷಣದ ನಿರೀಕ್ಷೆಗಳನ್ನು ಪೂರೈಸಲು, ಮುಂದಿನ ಪೀಳಿಗೆಯ ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳಿಗೆ ಅನುವುಮಾಡಿಕೊಡುವಲ್ಲಿ ಓದುವಿಕೆ ಮತ್ತು ಬರವಣಿಗೆಯ ಸದೃಢ ಅಡಿಪಾಯಗಳು ಪ್ರಮುಖ ಪಾತ್ರವಹಿಸುತ್ತವೆ. ಆದಾಗ್ಯೂ, ಭಾರತೀಯ ಶೈಕ್ಷಣಿಕ ಸನ್ನಿವೇಶದಲ್ಲಿ ಆ ಗುರಿಯನ್ನು ಸಾಧಿಸಲು ಸಾಕಷ್ಟು ಸ್ಪಷ್ಟತೆ ಇಲ್ಲ. 'ಎಲ್ಲರಿಗೂ ಮುಕ್ತ'ವೆನಿಸುವ ಮತ್ತು ಅನೇಕ ಗೊಂದಲಗಳಿಂದ ಕೂಡಿದ ಪರಿಸ್ಥಿತಿಯಲ್ಲಿ, ಚಿಕ್ಕ ವಯಸ್ಸಿನ ಮತ್ತು ಪ್ರಾರಂಭಿಕ ಹಂತದ ವಿದ್ಯಾರ್ಥಿಗಳಿಗೆ ಓದು ಮತ್ತು ಬರಹವನ್ನು ಕಲಿಸುವ ನಿಟ್ಟಿನ ಹಲವಾರು ಸಂಘರ್ಷಯುತ ವಿಧಾನಗಳನ್ನು ಕಾಣಬಹುದಾಗಿದೆ. ಆರಂಭಿಕ ಹಂತದ ಓದುವಿಕೆ ಮತ್ತು ಬರವಣಿಗೆಯ ಈ ವಿಧಾನಗಳು ಸಾಮಾನ್ಯವಾಗಿ ಮಕ್ಕಳ ನೈಸರ್ಗಿಕ ಕಲಿಕೆಯ ಪ್ರಕ್ರಿಯೆಗಳು ಮತ್ತು ನಿಜ ಜೀವನದ ಸಂದರ್ಭಗಳ ಸೂಕ್ತ ತಿಳಿವಳಿಕೆಯನ್ನು ಆಧರಿಸಿರುವುದಿಲ್ಲ. ಬದಲಾಗಿ, ಅವುಗಳನ್ನು ಪ್ರಾಯೋಗಿಕತೆ ಮತ್ತು ಹೇಗೋ ನಿಭಾಯಿಸಿಕೊಂಡು ಹೋಗುವ ನಿಟ್ಟಿನಲ್ಲಿ ಚಾಲನೆಗೊಳಿಸಲಾಗಿದೆ. 1993ರಷ್ಟು ಹಿಂದೆಯೇ, ಯಶ್ಪಾಲ್ ಸಮಿತಿಯು ***'ಹೊರೆಯಿಲ್ಲದೆ ಕಲಿಕೆ'*** ಕುರಿತ ತನ್ನ ವರದಿಯಲ್ಲಿ, ಭಾರತದಲ್ಲಿ ಶಾಲಾ ಆಧಾರಿತ ಕಲಿಕೆಯು ಅರ್ಥಹೀನವೂ ಸಂತಸರಹಿತವೂ ಆಗಿರುವುದನ್ನು, ತರಗತಿಯೊಳಗೆ ಅರ್ಥಗ್ರಹಿಕೆಯಿಲ್ಲದಿರುವುದನ್ನು ಪ್ರಬಲವಾಗಿ ಪ್ರಸ್ತುತಪಡಿಸಿದೆ. ಆದಾಗ್ಯೂ, ಸ್ವಾತಂತ್ರ್ಯ ಗಳಿಸಿದ 60 ವರ್ಷಗಳ ನಂತರವೂ, ಆರಂಭಿಕ ಸಾಕ್ಷರತಾ ಕ್ಷೇತ್ರವನ್ನು ಕುರಿತ ಸೂಕ್ತ ಸಂಶೋಧನೆಯು ನಡೆದಿರುವುದಿಲ್ಲ, ಶಾಲೆಯ ಕಾರ್ಯಕ್ಷಮತೆ, ತರಗತಿಯಲ್ಲಿ ಭಾಗವಹಿಸುವಿಕೆ ಮತ್ತು ಮಕ್ಕಳು ಶಿಕ್ಷಣವನ್ನು ತೊರೆದು ಶಾಲೆಯಿಂದ ವಿಮುಖರಾಗುವ ವಿಷಯಗಳು ಗಂಭೀರ ಕಾಳಜಿಯನ್ನು ಬಯಸುತ್ತವೆ (ಗೋವಿಂದ, 2007).

ಈ ಹಿಂದಿನ ಭಾಗದಲ್ಲಿ ನೀಡಲಾದ ಈ ಕೆಲವು ಕಳವಳಕಾರಿ ವಿಷಯಗಳನ್ನು ಆಧರಿಸಿ, ಸರ್ ರತನ್ ಟಾಟಾ ಟ್ರಸ್ಟ್, ಏಪ್ರಿಲ್ 2011ರಲ್ಲಿ ಆರಂಭಿಕ ಸಾಕ್ಷರತೆ ಕುರಿತು ಒಂದು ಸಮಾಲೋಚನೆಗೆ ಅನುವುಮಾಡಿಕೊಟ್ಟಿತು. ಈ ಸಮಾಲೋಚನೆಯ ಪ್ರಮುಖ ಗುರಿ, ಆರಂಭಿಕ ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಪರಿಕಲ್ಪನಾತ್ಮಕ ಸ್ಪಷ್ಟತೆಯನ್ನು ಉತ್ತೇಜಿಸುವುದಾಗಿತ್ತು. ಈ ಸಮಾಲೋಚನೆಯ ನಂತರ, ಮುಂದಿನ ಚರ್ಚೆಗೆ ಆಸ್ಪದ ನೀಡಲಿಕ್ಕಾಗಿ, ಆರಂಭಿಕ ಸಾಕ್ಷರತೆಗಾಗಿ ಸಾಮಾಜಿಕವಾಗಿ ಸೂಕ್ಷ್ಮವೆನಿಸಬಲ್ಲ ಮತ್ತು ಸಮತೋಲಿತ ವಿಧಾನವನ್ನು ಕುರಿತ ಪರಿಕಲ್ಪನಾತ್ಮಕ ಚೌಕಟ್ಟಿನ ರೂಪುರೇಖೆಯನ್ನು ರೂಪಿಸಲಾಯಿತು. ಆರಂಭಿಕ ಸಾಕ್ಷರತೆಯನ್ನು ಕುರಿತ ಪ್ರಸ್ತುತ ಚಿಂತನೆಯ ಸನ್ನಿವೇಶದಲ್ಲಿ ಈ ಸಮಾಲೋಚನೆಯಲ್ಲಿ ಸೂಚಿಸಲಾದ ಆರಂಭಿಕ ಸಾಕ್ಷರತೆಗಾಗಿ ಈ ಲೇಖನವು ಪರಿಕಲ್ಪನಾತ್ಮಕ ಚೌಕಟ್ಟನ್ನು ಒದಗಿಸುತ್ತದೆ.

**ಆರಂಭಿಕ ಸಾಕ್ಷರತೆ ಕುರಿತ ಪ್ರಸ್ತುತ ಚಿಂತನೆ**

ಜೀವನದ ಮೊದಲ ಕೆಲವು ವರ್ಷಗಳಲ್ಲಿ ಅರ್ಥಪೂರ್ಣ ಓದುವಿಕೆ ಮತ್ತು ಬರವಣಿಗೆಗೆ ಅಡಿಪಾಯ ಹಾಕಲಾಗುತ್ತದೆ. 1980 ಮತ್ತು 1990ರ ದಶಕಗಳಲ್ಲಿ, ಆರಂಭಿಕ ಓದುವಿಕೆ ಮತ್ತು ಬರವಣಿಗೆಯ ಕ್ಷೇತ್ರದಲ್ಲಿ (ಟೀಲ್ ಮತ್ತು ಷಾಲ್ಜ್ ಬಿ 1986) ಹೊಸ ಸಾಕ್ಷರತಾ ದೃಷ್ಟಿಕೋನವು ಪ್ರಬಲವಾಗಿ ಪ್ರಭಾವಿಸಿತ್ತು. ಅವರ ದೃಷ್ಟಿಕೋನದ ಪ್ರಕಾರ, ಮಕ್ಕಳು ಬಹಳ ಚಿಕ್ಕವಯಸ್ಸಿನಲ್ಲಿಯೇ ವಿವಿಧ ಅನೌಪಚಾರಿಕ ಸಂದರ್ಭಗಳಲ್ಲಿ, ದೈನಂದಿನ ಓದುವಿಕೆ ಮತ್ತು ಬರವಣಿಗೆಯ ಚಟುವಟಿಕೆಗಳಲ್ಲಿ ವಯಸ್ಕರು ಮತ್ತು ಇತರ ಮಕ್ಕಳನ್ನು ಗಮನಿಸುವ, ಅವರೊಂದಿಗೆ ಸಂವಹಿಸುವ ಮತ್ತು ಅವರ ಜೊತೆ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಸ್ವಾಭಾವಿಕವಾಗಿ ಓದಲು ಮತ್ತು ಬರೆಯಲು ಕಲಿಯುತ್ತಾರೆ. ಈ ಚಟುವಟಿಕೆಗಳು

ವಾರ್ತಾಪತ್ರಿಕೆಯ ಓದುವಿಕೆ, ವಸ್ತುಗಳ ಚಿತ್ರ ಬಿಡಿಸುವುದು, ಮನೆಗೆ ಬೇಕಾದ ಸಾಮಾನಿನ ಪಟ್ಟಿಯನ್ನು ಬರೆಯುವುದು, ಲೇಬಲ್‌ಗಳು ಮತ್ತು ನಾಮ ಫಲಕಗಳನ್ನು ಓದುವುದು, ಗಟ್ಟಿಯಾಗಿ ಓದುವ ಕಥೆಗಳನ್ನು ಕೇಳುವುದು ಇತ್ಯಾದಿಗಳಾಗಿರಬಹುದು. ಶಾಲಾಪೂರ್ವ ಎಳೆಯ ಮಕ್ಕಳು ತಮ್ಮ ಮನೆಯಲ್ಲಿ ಮತ್ತು ಸಾಮಾಜಿಕ ಗುಂಪುಗಳಲ್ಲಿ ಮುದ್ರಣ ಆಧಾರಿತ ಚಟುವಟಿಕೆಗಳನ್ನು ಗಮನಿಸುತ್ತಾರೆ ಮತ್ತು ಅನೌಪಚಾರಿಕವಾಗಿ ಅದರಲ್ಲಿ ಭಾಗವಹಿಸುತ್ತಾರೆ. ಅಂತಹ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸಿಕೊಳ್ಳಲು ಮತ್ತು ಮುದ್ರಣದ ಬಗ್ಗೆ ಜ್ಞಾನವನ್ನು ಪಡೆಯಲು ಮಕ್ಕಳು ಪ್ರಾರಂಭಿಸುತ್ತಾರೆ. ಉದಾಹರಣೆಗೆ, ಲಿಖಿತ ಚಿಹ್ನೆಗಳಿಗೆ ಅರ್ಥವಿದೆ ಮತ್ತು ಮಾತನಾಡುವ ಶಬ್ದಗಳು ಮತ್ತು ಲಿಖಿತ ಭಾಷೆಯ ಚಿಹ್ನೆಗಳ ನಡುವೆ ಸಂಬಂಧವಿದೆಯೆಂಬುದನ್ನು ಗ್ರಹಿಸತೊಡಗುತ್ತಾರೆ. ಅವರು ಕೆಲವು ಬರವಣಿಗೆಯ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರಲ್ಲದೆ, ಪುಟದ ಎಡದಿಂದ ಬಲಕ್ಕೆ ಕಲ್ಪಿತ ಪದಗಳನ್ನು ಗೀಚಲು ಪ್ರಯತ್ನಿಸುತ್ತಾರೆ. ಅವರು, ಪದಗಳು, ವಾಕ್ಯಗಳನ್ನು ಸೂಚಿಸುವ ಕಲ್ಪಿತ ಸಂದೇಶಗಳನ್ನು ಬರೆಯುತ್ತಾರೆ. ಬರವಣಿಗೆಯ ಈ ವಿವಿಧ ವಿಷಯಗಳನ್ನು ಮಗುವಿಗೆ ಯಾರೂ ಕಲಿಸಿರುವುದಿಲ್ಲ. ಮಕ್ಕಳು ಮಾತನಾಡುವ ಭಾಷೆಯನ್ನು ಹೇಗೆ ಸುತ್ತಲಿನ ಪರಿಸರದಿಂದ ಕಲಿಯುತ್ತಾರೋ, ಹಾಗೆಯೇ ತಮ್ಮ ನಿಜ ಜೀವನದ ಅನುಭವದಿಂದ ಬರವಣಿಗೆಯನ್ನು ಕೂಡ ಕಲಿಯುತ್ತಾರೆ.

ಗಾರ್ಡನ್ ವೆಲ್ಸ್ (2003), ಈ ಆರಂಭಿಕ ಅನುಭವಗಳನ್ನು ಸಾಕ್ಷರತೆಯ ವಿಸ್ತೃತ 'ಅಭ್ಯಾಸಾವಧಿ' ಎಂದು ಉಲ್ಲೇಖಿಸುತ್ತಾರೆ, ಇದರ ಮೂಲಕ ಶಾಲಾಪೂರ್ವ ಎಳೆಯ ಮಕ್ಕಳು ಸಾಕ್ಷರ ಕುಟುಂಬ ಸದಸ್ಯರೊಂದಿಗೆ ಲಿಖಿತ ಪಠ್ಯವನ್ನು ಆಧರಿಸಿದ ಜಂಟಿ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಹೀಗೆ ಮುದ್ರಣಕ್ಕೆ ಅನೌಪಚಾರಿಕವಾಗಿ ತೆರೆದುಕೊಳ್ಳುವ ಮೂಲಕ, ಅನೇಕ ಮಕ್ಕಳು, ಯಾವ ಮಕ್ಕಳು ತರಗತಿ ಕೋಣೆಗಳಿಗೆ ಪ್ರವೇಶಿಸಿದಾಗ ಮಾತ್ರವೇ ಮೊದಲ ಬಾರಿಗೆ ಮುದ್ರಣದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆಯೋ, ಅವರಿಗಿಂತಲೂ ಸಾಕಷ್ಟು ಹೆಚ್ಚಿನ ಕಲಿಕೆಯೊಂದಿಗೆ ಶಾಲೆಯನ್ನು ಪ್ರವೇಶಿಸುತ್ತಾರೆ. ಎಲ್ಲಾ ಮಕ್ಕಳು ತಮ್ಮ ಆರಂಭಿಕ ಬಾಲ್ಯದಲ್ಲಿ ಮುದ್ರಣ ಆಧಾರಿತ ಅನುಭವಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಮಕ್ಕಳು ಶಾಲೆಗೆ ಪ್ರವೇಶಿಸಿದಾಗ ಕಲಿಕೆಗೆ ವಿವಿಧ ಹಂತಗಳಲ್ಲಿ ಸಿದ್ಧಗೊಂಡಿರುತ್ತಾರೆ.

ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳು ಸಮೃದ್ಧ ಮೌಖಿಕ ಸಂಪ್ರದಾಯಗಳಿಂದ ಅಥವಾ 'ಸಾಕ್ಷರತಾರಹಿತ ಸಂಸ್ಕೃತಿ'ಗಳಿಂದ ಬಂದವರಾಗಿರುತ್ತಾರೆ. ತಮ್ಮ ಮನೆಗಳಲ್ಲಿ ವಿವಿಧ ರೀತಿಯ ಓದುವಿಕೆ ಮತ್ತು ಬರಹದೊಂದಿಗೆ ಈಗಾಗಲೇ ಸಕ್ರಿಯ ಅನುಭವವನ್ನು ಹೊಂದಿರುವ ಮಕ್ಕಳೊಂದಿಗೆ ಹೋಲಿಸಿದಲ್ಲಿ ಈ ಮಕ್ಕಳು, ಅಷ್ಟೇ ಪ್ರಮಾಣ ಸಿದ್ಧತೆಯೊಂದಿಗೆ ಶಾಲೆಯನ್ನು ಪ್ರವೇಶಿಸುವುದಿಲ್ಲ. ಈ ಮಕ್ಕಳಲ್ಲಿನ ಅನೇಕರು ಸಾಮಾಜಿಕವಾಗಿ ಹಿಂದುಳಿದ ಗುಂಪುಗಳಿಗೆ ಸೇರಿರುವುದು ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಕೆಲವೊಮ್ಮೆ ಇವರನ್ನು 'ಶಾಲಾ ಕಲಿಕೆಗೆ ಅನರ್ಹರು' ಎಂದು ಪರಿಗಣಿಸಲಾಗುತ್ತದೆ. ಇದಲ್ಲದೆ, ಈ ಚಿಕ್ಕ ಮಕ್ಕಳಲ್ಲಿನ ಅನೇಕರಿಗೆ ಮನೆಯಲ್ಲಿ ಓದಲು ಮತ್ತು ಬರೆಯಲು ಬೆಂಬಲವಿರುವುದಿಲ್ಲ. ಈ ಎಲ್ಲಾ ಅಂಶಗಳು ಶಾಲೆಯಲ್ಲಿ ಮಕ್ಕಳ ಸಾಧನೆಯ ಮೇಲೆ ಪರಿಣಾಮ ಬೀರುತ್ತವೆ.

ಶಾಲೆಗೆ ಬರುವ ಎಲ್ಲಾ ಮಕ್ಕಳು ತಮ್ಮ ಜ್ಞಾನ, ನೈಜ ಜಗತ್ತಿನ ಅನುಭವಗಳನ್ನು ಅವರು ಮನೆಯಲ್ಲಿ ಮಾತನಾಡುವ ಭಾಷಾ ಕೌಶಲಗಳನ್ನು ಶಾಲೆಗೆ ತರುತ್ತಾರೆ ಎಂಬುದನ್ನು ಗಮನಿಸುವುದು ಮುಖ್ಯ. ಜೊತೆಗೆ ತರಗತಿಗಳಲ್ಲಿ ಉದ್ದೇಶಪೂರ್ವಕವಾಗಿ ತೊಡಗಲು ಅವರು ತಮ್ಮ ಕಲ್ಪನೆಗಳು, ಕುತೂಹಲಗಳು ಮತ್ತು ಸ್ವಾಭಾವಿಕ ಒಲವುಗಳನ್ನೂ ತರಗತಿಗೆ ತರುತ್ತಾರೆ. ಈ ಸಂಪನ್ಮೂಲಗಳು ಮಕ್ಕಳಿಗೆ ತಮ್ಮ ತರಗತಿಯ ಹೊಸ ಅನುಭವಗಳನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಸಹಾಯಮಾಡುತ್ತವೆ. ಮಕ್ಕಳು ತಮ್ಮೊಂದಿಗೆ ತರುವ ಶಾಲಾ ಪರಿಸರದ ಹೊರಗಿನ

ಅನುಭವಗಳನ್ನು ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಮಕ್ಕಳಿಗೆ ತರಗತಿಯ ಕಲಿಕೆಯ ಪರಿಸರ ಮತ್ತು ಶಾಲಾ ಪಠ್ಯಕ್ರಮವು ಸಾಕಷ್ಟು ಅವಕಾಶಗಳನ್ನು ಒದಗಿಸುವಲ್ಲಿ ದುರದೃಷ್ಟವಶಾತ್, ಅನೇಕ ಬಾರಿ ವಿಫಲವಾಗುತ್ತಿದೆ. ಆರಂಭಿಕ ಸಾಕ್ಷರತಾ ಯೋಜನೆಯ (ಇಎಲ್‌ಪಿ) ತರಗತಿಗಳಲ್ಲಿ ಕೆಲಸ ಮಾಡುವಾಗ, ಅಪರಿಚಿತ ಮುದ್ರಣ ((print) ಪರಿಸರ ಮತ್ತು ತರಗತಿಯೊಳಗೆ ಬಳಸುವ ಕಲಿಕೆಯ ಭಾಷೆಯಿಂದ ಭಯಭೀತರಾಗುವ ಮತ್ತು ಓದಿ ಬರೆಯಲು ಹಿಂಜರಿಯುವ ಸಮಸ್ಯೆಗಳನ್ನು ಎದುರಿಸುತ್ತಿರುವ ಅನೇಕ ಮಕ್ಕಳೊಂದಿಗೆ ನಾವು ಸಂವಹನ ನಡೆಸಿದ್ದೇವೆ.

**ಸೈದ್ಧಾಂತಿಕ ಹಿನ್ನೆಲೆ**

ವೈಗೋಟ್ಸ್ಕಿಯವರು (1987) ಸಾಕ್ಷರತೆಯ ಆರಂಭಿಕ ನೆಲೆಗಳು ಸಂವಹನದ ಮೊಟ್ಟಮೊದಲ ಕ್ರಿಯೆಗಳಲ್ಲಿವೆ ಹಾಗೂ ಮುಖಭಾವದ ಅಭಿವ್ಯಕ್ತಿಗಳು, ಸನ್ನೆಮಾಡುವುದು, ಆಟವಾಡುವುದು, ಮಾತನಾಡುವುದು, ಚಿತ್ರ ಬಿಡಿಸುವುದು, ಗೀಚುವುದು ಮತ್ತು ಬರೆಯುವುದೆಲ್ಲವೂ ಅರ್ಥವನ್ನು ರೂಪಿಸುವ ಮತ್ತು ಸಂವಹನ ಮಾಡುವ ನಿಟ್ಟಿನ ಕಲಿಕೆಯ ಏಕೀಕೃತ ಪ್ರಕ್ರಿಯೆಯ ಭಾಗವಾಗಿವೆ ಎಂದು ವಿವರಿಸಿದ್ದಾರೆ. ಅವರು, ದೈನಂದಿನ ಪರಿಕಲ್ಪನೆಯ ರಚನೆ ಮತ್ತು ವೈಜ್ಞಾನಿಕ ಪರಿಕಲ್ಪನೆಯ ರಚನೆಯ ನಡುವೆ ಅರ್ಥಪೂರ್ಣ ಸಂಬಂಧವನ್ನು ರೂಪಿಸುವ ಅಗತ್ಯದ ಬಗ್ಗೆಯೂ ಒತ್ತು  ನೀಡಿದ್ದಾರೆ. ಮಕ್ಕಳು ಮತ್ತು ವಯಸ್ಕರ ದಿನನಿತ್ಯದ ಜೀವನದ ಅನುಭವಗಳಲ್ಲಿ ನೆಲೆಗೊಂಡ ದೈನಂದಿನ ಪರಿಕಲ್ಪನೆಗಳು, ಔಪಚಾರಿಕ ಶಾಲಾ ಶಿಕ್ಷಣದ ಮೂಲಕ ಬೋಧಿಸಲಾಗುವ ವೈಜ್ಞಾನಿಕ ಪರಿಕಲ್ಪನೆಗಳನ್ನು ಕಲಿಯಲು ಆಧಾರವನ್ನು ಒದಗಿಸುತ್ತವೆಂದು ಅವರು ನಂಬಿದ್ದಾರೆ. ಉದಾಹರಣೆಗೆ, ಮಕ್ಕಳು ತಮ್ಮ ದೈನಂದಿನ ಅನುಭವಗಳು ಮತ್ತು ಕಲಿಕೆಯ ಸಹಜ ಪ್ರಕ್ರಿಯೆಗಳ ಮೂಲಕ ತಮ್ಮ ಆಡುಭಾಷೆಯ ಭಾಷಾ ಸ್ವರೂಪದ ಬಗ್ಗೆ ಈಗಾಗಲೇ ತಿಳಿದಿದ್ದಲ್ಲಿ, ಶಾಲೆಯಲ್ಲಿ ಉಪಕ್ರಮಿಸಲಾಗುವ ಭಾಷೆಯ ಪ್ರಕಾರಗಳು ಮತ್ತು ಸ್ವರೂಪಗಳ ಅಧ್ಯಯನವು ಸಾಧ್ಯವಾಗುತ್ತದೆ ಎಂದು ವೈಗೊಟ್ಸ್ಕಿ ವಾದಿಸುತ್ತಾರೆ.

ಉರುಹೊಡೆಯುವುದು ಮತ್ತು ನೆನಪಿಟ್ಟುಕೊಳ್ಳುವುದೇ ಕಲಿಕೆಯ ಪರ್ಯಾಯಗಳೆನಿಸಿರುವ ಭಾರತದಲ್ಲಿ, ವೈಗೋಟ್ಸ್ಕಿಯ ವಿಚಾರಗಳು ಶಾಲಾ ಆಧಾರಿತ ಸಾಕ್ಷರತಾ ಕಲಿಕೆಯ ಮೇಲೆ ಪ್ರಮುಖ ಪರಿಣಾಮಗಳನ್ನು ಬೀರಿವೆ. ಭಾರತದಾದ್ಯಂತ ಹರಡಿರುವ ಸಾವಿರಾರು ಶಾಲೆಗಳಲ್ಲಿ ಕಲಿಯುವವರ ಅತ್ಯಂತ ವೈವಿಧ್ಯಮಯ ಗುಂಪುಗಳಿವೆ. ಮೊದಲೇ ಹೇಳಿದಂತೆ, ಒಂದುಕಡೆ, ಓದು ಮತ್ತು ಬರಹವು ತಮ್ಮ ಮನೆ ಮತ್ತು ಸಮುದಾಯಗಳಲ್ಲಿನ ದೈನಂದಿನ ಜೀವನದ ಭಾಗವಾಗಿರುವ ಮಕ್ಕಳಿದ್ದಾರೆ. ಮತ್ತೊಂದು ತುದಿಯಲ್ಲಿ, ಓದು, ಬರಹ ಮತ್ತು ಮುದ್ರಣ ಆಧಾರಿತ ಚಟುವಟಿಕೆಗಳು ತಮ್ಮ ದೈನಂದಿನ ಜೀವನದ ಭಾಗವಲ್ಲದ ಮಕ್ಕಳೂ ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ.


ಇದು ಎರಡು ಪ್ರಮುಖ ಕಾಳಜಿಗಳನ್ನು ಕುರಿತು ಚರ್ಚಿಸುತ್ತದೆ:

1. ಮಕ್ಕಳ ಸ್ವಾಭಾವಿಕ ಓದು ಮತ್ತು ಬರಹದ ವಿಧಾನಗಳನ್ನು ಬೆಂಬಲಿಸುವ ವಿವಿಧ ಅನುಭವಗಳು ತರಗತಿಗಳ ಒಳಗೆ ಅವರಿಗೆ ಲಭ್ಯವಾಗುವುದನ್ನು ಖಾತರಿಪಡಿಸುವ ಅವಶ್ಯಕತೆಯಿದೆ. ಮನೆ ಮತ್ತು ಸಮುದಾಯ ಆಧಾರಿತ ಸಾಕ್ಷರತೆ, ಭಾಷಾ ಅಭ್ಯಾಸಗಳು ಮತ್ತು ಶಾಲಾ ಆಧಾರಿತ ಅಭ್ಯಾಸಗಳ ನಡುವೆ ನಿಕಟ ಹೊಂದಾಣಿಕೆ ಇದ್ದರೆ ಮಕ್ಕಳು ಅರ್ಥಪೂರ್ಣ ಓದು-ಬರಹದ ಪ್ರಬಲ ಅಡಿಪಾಯಗಳನ್ನು ರೂಪಿಸಿಕೊಳ್ಳುತ್ತಾರೆ ಎಂದು ಇತ್ತೀಚಿನ ಅಧ್ಯಯನಗಳು ತೋರಿಸಿವೆ.

2. ಶಾಲೆಗೆ ಪ್ರವೇಶಿಸಿದ ನಂತರವೇ ಲಿಖಿತ ಪದಗಳು ಮತ್ತು ಮುದ್ರಣ ಆಧಾರಿತ ಅನುಭವಗಳೊಂದಿಗಿನ ಸಕ್ರಿಯ ತೊಡಗುವಿಕೆಯು ಸಾಧ್ಯವಾಗುವ ಮಕ್ಕಳ ವಿಶೇಷ ಸಾಕ್ಷರತಾ ಅಭ್ಯಾಸಗಳ ಅವಶ್ಯಕತೆಗಳತ್ತ ಗಮನಹರಿಸುವ ಅಗತ್ಯವಿದೆ. .

**ಆರಂಭಿಕ ಸಾಕ್ಷರತೆಗಾಗಿ ಪರಿಕಲ್ಪನಾತ್ಮಕ ಚೌಕಟ್ಟು**

ಆರಂಭಿಕ ಸಾಕ್ಷರತಾ ಯೋಜನೆಯು (ಇಎಲ್‌ಪಿ) ಓದುವಿಕೆಯೆಂಬುದು ಏನು ಮತ್ತು ಅದನ್ನು ಹೇಗೆ ಕಲಿಸತಕ್ಕದ್ದು ಎಂಬುದರ ಕುರಿತು ಸ್ವಲ್ಪಮಟ್ಟಿನ ಸ್ಪಷ್ಟತೆಯನ್ನು ತರಲು ಪ್ರಯತ್ನಿಸಿದೆ. ಈ ಪರಿಕಲ್ಪನೆಯು ಹೆಚ್ಚು ವಿವಾದಾಸ್ಪದವಾಗಿದೆಯಲ್ಲದೆ, ಅನೇಕ ವಿರೋಧಾತ್ಮಕ ದೃಷ್ಟಿಕೋನಗಳನ್ನು ಹೊಂದಿದೆ. ಮಕ್ಕಳಲ್ಲಿ ಅರ್ಥಪೂರ್ಣ ಓದುವಿಕೆ ಮತ್ತು ಬರವಣಿಗೆಯನ್ನು ಸೃಜಿಸುವ ಕಾರ್ಯ ವಿಧಾನಗಳು ಮತ್ತು ಅದಕ್ಕೆ ಬೆಂಬಲ ನೀಡುವ ಪರಿಸರವನ್ನು ಅಭಿವೃದ್ಧಿಪಡಿಸಲು ಇಎಲ್‌ಪಿ, ಸಂಪನ್ಮೂಲದ ಕೊರತೆಯಿರುವ ತರಗತಿಗಳಲ್ಲಿ ನಿರಂತರವಾಗಿ ಬಹುಕಾಲದವರೆಗೆ ತೀವ್ರ ಪ್ರಯತ್ನಗಳನ್ನು ಕೈಗೊಂಡಿದೆ. ಭಾಷಾ ಜ್ಞಾನ, ದೇವನಾಗರಿ ಲಿಪಿಯ ಶಬ್ದ ಮತ್ತು ಸಂಕೇತಗಳನ್ನು ಸಂಸ್ಕರಿಸಲು ಅಗತ್ಯವಾದ ಕೌಶಲಗಳು; ಮತ್ತು ಅರ್ಥವನ್ನು ಗ್ರಹಿಸಲು ಅಗತ್ಯವಾದ ಜ್ಞಾನಾತ್ಮಕ ಕೌಶಲಗಳೊಂದಿಗೆ ಎಳೆಯ, ಮೊದಲ ತಲೆಮಾರಿನ ಸಾಕ್ಷರತೆಯ ಅಭ್ಯಾಸಿಗಳನ್ನು ಸಜ್ಜುಗೊಳಿಸುವುದನ್ನು ಇದು ಒಳಗೊಂಡಿದೆ.




ಅಂಚಿಗೆ ದೂಡಲ್ಪಟ್ಟಿರುವ ಮತ್ತು ನಿರಕ್ಷರ ಹಿನ್ನೆಲೆಯುಳ್ಳ ಮಕ್ಕಳಿಗೆ ಅರ್ಥಪೂರ್ಣವಾಗಿ ಓದುವ ಮತ್ತು ಬರೆಯುವ ಬಲವಾದ ಅಡಿಪಾಯವನ್ನು ರೂಪಿಸುವ ತರಗತಿಯ ಪರಿಸರ ಮತ್ತು ಕಾರ್ಯ ವಿಧಾನಗಳನ್ನು ಅಭಿವೃದ್ಧಿಪಡಿಸುವುದು (ಈ ಸಂದರ್ಭದಲ್ಲಿ, ಹಿಂದಿ ಭಾಷೆ) ಆರಂಭಿಕ ಸಾಕ್ಷರತಾ ಚೌಕಟ್ಟಿನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಎಳೆಯ ವಿದ್ಯಾರ್ಥಿಗಳಿಗೆ ಓದು-ಬರಹವನ್ನು ಆನಂದದಾಯಕ ಮತ್ತು ಅರ್ಥಪೂರ್ಣವಾಗಿಸುವ ಪ್ರಕ್ರಿಯೆಯೊಂದಿಗೆ ಆಳವಾದ ಸಹಭಾಗಿತ್ವವನ್ನು ರೂಪಿಸುವ ಗುರಿಯನ್ನು ಇದು ಹೊಂದಿದೆ. ಈ ಚೌಕಟ್ಟು, ಆಡುಭಾಷೆಗಳಿಗೆ (ಈ ಸಂದರ್ಭದಲ್ಲಿ, ಹಿಂದಿ ಭಾಷೆ) ಮತ್ತು ಮಕ್ಕಳ ದೈನಂದಿನ ಜೀವನಾನುಭವಗಳಿಗೆ ಪ್ರಾಧಾನ್ಯತೆಯನ್ನು ನೀಡುತ್ತದೆ. ತರಗತಿಯೊಳಗಿನ ಮಕ್ಕಳಿಗೆ ತಮ್ಮ ನೈಜ ಬದುಕಿನ ಅನುಭವಗಳನ್ನು ಮತ್ತು ಆಲೋಚನೆಗಳನ್ನು ವಿವಿಧ ರೀತಿಯಲ್ಲಿ ಹಂಚಿಕೊಳ್ಳಲು ಇದು

ಅವಕಾಶಗಳನ್ನು ಒದಗಿಸುತ್ತದೆ. ಹೀಗಾಗಿ, ಮಕ್ಕಳು ತಮ್ಮದೇ ಆದ ಮಾತುಗಳಲ್ಲಿ ನೈಜ ಭಾವನೆಗಳು, ಕಾಳಜಿಗಳು, ಆಲೋಚನೆಗಳು ಮತ್ತು ಕಲ್ಪನೆಗಳನ್ನು ವಿಭಿನ್ನ ರೀತಿಯಲ್ಲಿ ಮುಕ್ತವಾಗಿ ಹಂಚಿಕೊಳ್ಳುತ್ತಾರೆ.

**ಪ್ರಮುಖ ಲಕ್ಷಣಗಳು**

● ಆರಂಭಿಕ ಸಾಕ್ಷರತೆಯ ಈ ಪರಿಕಲ್ಪನಾತ್ಮಕ ಚೌಕಟ್ಟು, ಮೌಖಿಕ ಭಾಷೆಯು ಮಗುವಿನ ಆರಂಭಿಕ ಸಾಕ್ಷರತೆಯ ಬೆಳವಣಿಗೆಗೆ ಅಡಿಪಾಯವನ್ನು ಒದಗಿಸುತ್ತದೆಯೆಂಬ ಗ್ರಹಿಕೆಯೊಂದಿಗೆ ಆಡುಭಾಷೆಯ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತದೆ.

● ಈ ಚೌಕಟ್ಟು, ಮಕ್ಕಳಿಗೆ ಮತ್ತು ತರಗತಿಯೊಳಗಿನ ಅವರ ವೈವಿಧ್ಯಮಯ ವೈಯಕ್ತಿಕ ಅಗತ್ಯಗಳಿಗೆ ಪ್ರಮುಖ ಸ್ಥಾನವನ್ನು ನೀಡುತ್ತದೆ

● ಇದು ಮಕ್ಕಳ ಸಹಜ ಕಲಿಕೆಯ ಪ್ರಕ್ರಿಯೆಯನ್ನು ಮತ್ತು ತಮ್ಮ ಅನುಭವ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಎಲ್ಲಾ ಮಾನವರಲ್ಲೂ ಕಂಡುಬರುವ ಸಹಜ ಬಯಕೆಯನ್ನು ಗುರುತಿಸುತ್ತದೆ.

● ಯೋಜಿತ ಮತ್ತು ಸಹಾಯಕವೆನಿಸಿದ ಸಮೃದ್ಧ ಮುದ್ರಣ ಆಧಾರಿತ ತರಗತಿಯಲ್ಲಿ ಮಕ್ಕಳ ಸಕ್ರಿಯ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ, ಮಕ್ಕಳ ಸಹಜ ಕಲಿಕಾ ಪ್ರಕ್ರಿಯೆಗೆ ಸ್ಥಾನವೊಂದನ್ನು ಸೃಜಿಸುವ ಮೂಲಕ ಸಾಕ್ಷರತೆಯ ಅಡಿಪಾಯವನ್ನು ರೂಪಿಸಲು ಇದು ಅವಕಾಶವೊಂದನ್ನು ಒದಗಿಸುತ್ತದೆ.

● ಇದು ಧ್ವನಿವಿಜ್ಞಾನದ ಸಂಸ್ಕರಣೆ ಮತ್ತು ಪದದ ಗುರುತಿಸುವಿಕೆ ಮತ್ತು ಅರ್ಥವನ್ನು ಗ್ರಹಿಸುವ ವಿವಿಧ ಪ್ರಕ್ರಿಯೆಗಳಿಗೆ ಅಗತ್ಯವಾದ ಪ್ರಮುಖ ಸಾಕ್ಷರತಾ ಕೌಶಲಗಳ ಸ್ಪಷ್ಟ ಬೋಧನೆಯನ್ನು ಸಹ ಕೇಂದ್ರೀಕರಿಸಿದೆ.

● ತರಗತಿಯ ಸಾಕ್ಷರತಾ ಅಭ್ಯಾಸಗಳು ಮತ್ತು ಮಕ್ಕಳ ಮನೆ ಮತ್ತು ನೈಜ ಜಗತ್ತಿನ ಅನುಭವಗಳ ನಡುವೆ ನಿರಂತರ ದ್ವಿಮುಖ ಹರಿವನ್ನು ಒದಗಿಸುವ ಮೂಲಕ ಮನೆಯಿಂದ ಶಾಲೆಯೆಡೆಗಿನ ಪರಿವರ್ತನೆಗಳನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿದೆ.

● ಸ್ವತಂತ್ರ ಮತ್ತು ಪ್ರವೃತ್ತ (engaged) ಓದುಗರು ಮತ್ತು ಬರಹಗಾರರನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಮಕ್ಕಳ ಸಾಹಿತ್ಯ ಮತ್ತು ಪರಿಸರ ಸಂಬಂಧಿತ ಮುದ್ರಣದ ಪಾತ್ರವನ್ನು ಇದು ಗುರುತಿಸುತ್ತದೆ.

**ಘಟಕಗಳು**

ಮೇಲಿನ ಚೌಕಟ್ಟನ್ನು ಎರಡು ಮುಖ್ಯ ಘಟಕಗಳಾಗಿ ವಿಸ್ತೃತವಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ:

1. ಓದುವಿಕೆ ಮತ್ತು ಬರವಣಿಗೆಯೊಂದಿಗೆ ಸುಸ್ಥಿರ ಮತ್ತು ಅರ್ಥಪೂರ್ಣವಾದ ತೊಡಗುವಿಕೆಗೆ ಅಡಿಪಾಯದ ಸೃಜನೆ ಮತ್ತು ಅದನ್ನು ಬಲಪಡಿಸುವತ್ತ ಗಮನ.

2. ಶಬ್ದ / ಧ್ವನಿವಿಜ್ಞಾನ ಸಂಸ್ಕರಣೆ ಮತ್ತು ಅರ್ಥ ಗ್ರಹಿಕೆಗೆ ಮೂಲ ಸಾಕ್ಷರತಾ ಕೌಶಲಗಳನ್ನು ಬೆಳೆಸುವತ್ತ ಗಮನ.

**1. ಓದುವಿಕೆ ಮತ್ತು ಬರವಣಿಗೆಯೊಂದಿಗೆ ಸುಸ್ಥಿರವಾಗಿ ತೊಡಗಿಸಿಕೊಳ್ಳಲು ಅಡಿಪಾಯಗಳನ್ನು ನಿರ್ಮಿಸುವತ್ತ ಗಮನ**

ಈ ಕೆಳಗಿನ ಮಧ್ಯಸ್ಥಿಕೆಗಳ ಮೂಲಕ:

1. ಮುದ್ರಿತ ಸಾಮಗ್ರಿಗಳಿಂದ ಸಮೃದ್ಧವಾದ ತರಗತಿಯ ಯೋಜಿತ ಮತ್ತು ಸಕ್ರಿಯ ಬಳಕೆ

**ಮುದ್ರಿತ ಸಾಮಗ್ರಿಗಳಿಂದ ಸಮೃದ್ಧವಾದ ತರಗತಿಗೆ ಸೂಚಿಸಲಾದ ಕೆಲವು ಅಂಶಗಳು**

- ತರಗತಿಗಳಿಗೆ ಹೆಸರು ಚೀಟಿಯನ್ನು ಅಂಟಿಸುವುದು
- ಆಗಾಗ್ಗೆ ಬದಲಾಯಿಸಬೇಕಾದ ಮಕ್ಕಳ ಬರಹಗಳು, ರೇಖಾಚಿತ್ರಗಳು, ಸಂಗ್ರಹಗಳು ಇತ್ಯಾದಿಗಳ ಪ್ರದರ್ಶನ.
- ಆಗಾಗ್ಗೆ ಬದಲಾಯಿಸಬೇಕಾದ ವಿವಿಧ ಪಠ್ಯಗಳು ಮತ್ತು ಶೀರ್ಷಿಕೆಗಳನ್ನು ಹೊಂದಿರುವ ಚಿತ್ರಗಳ ಪ್ರದರ್ಶನ
- ವಿಶೇಷ ಗಮನವನ್ನು ನೀಡಬೇಕಾದ ಕ್ಷೇತ್ರಗಳು:

- ಪುಸ್ತಕ ವಲಯ
- ಕವಿತೆಯ ವಲಯ
- ಸಂದೇಶ ಫಲಕಗಳು (ಅರ್ಥಪೂರ್ಣ ಮತ್ತು ಮುಂಜಾನೆಗೆ ಸಂಬಂಧಿಸಿದ ದೈನಂದಿನ ಸರಳ ಸಂದೇಶಗಳನ್ನು ಸೇರಿಸಬಹುದು)
- ಪದಗಳಿಂದ ತುಂಬಿದ ಗೋಡೆಗಳು

ಮೇಲಿನ ಕ್ಷೇತ್ರಗಳಲ್ಲಿ ಮತ್ತು ಸಾಧ್ಯವಾದಲ್ಲೆಲ್ಲಾ ಲಿಖಿತ ಸೂಚನೆಗಳು ಮತ್ತು ಶೀರ್ಷಿಕೆಗಳು

- ಮುಕ್ತ ಬರಹ ಮತ್ತು ರೇಖಾಚಿತ್ರಕ್ಕಾಗಿ ಸ್ಥಳಾವಕಾಶ.

ಮುದ್ರಿತ ಸಾಮಗ್ರಿಗಳಿಂದ ಸಮೃದ್ಧವಾದ ತರಗತಿಯು ಅರ್ಥಪೂರ್ಣ ಓದಿಗೆ ಮತ್ತು ಬರವಣಿಗೆಗೆ ತಳಪಾಯವನ್ನು ಸೃಜಿಸಬಲ್ಲ ಕೆಲವು ಮಾರ್ಗಗಳು.

**2. ಸಾಹಿತ್ಯ ಮತ್ತು ಪಠ್ಯಗಳ ಮಾಹಿತಿಯನ್ನು ಅನಾವರಣಗೊಳಿಸುವ (exposure) ಓದಿನ ಕಾರ್ಯಕ್ರಮ:**

.ಅರ್ಥಪೂರ್ಣ ಓದಿನ ಕೆಲವು ಪ್ರಮುಖ ಅಂಶಗಳು:

● ಕಥಾಸಾಹಿತ್ಯ ಮತ್ತು ಕಥಾ ಸಾಹಿತ್ಯವಲ್ಲದ ವೈವಿಧ್ಯಮಯ ಪುಸ್ತಕಗಳು ಮತ್ತು ಸಾಹಿತ್ಯದೊಂದಿಗೆ ತೊಡಗಿಸಿಕೊಳ್ಳುವ ಅವಕಾಶ

● ಸಾಹಿತ್ಯಕ್ಕೆ ಅನೇಕ ವಿಧಗಳಲ್ಲಿ ಪ್ರತಿಕ್ರಿಯಿಸುವ ಅವಕಾಶ

**ಸೌಂದರ್ಯ ಪ್ರಜ್ಞೆ –** ಪಠ್ಯವನ್ನು ಅನುಭವಿಸುವುದು ಮತ್ತು ಭಾವನೆಗಳ ಅಭಿವ್ಯಕ್ತಿ, ಕಲ್ಪನೆ ಹಾಗೂ ಇತರೆ ಅನುಭವಜನ್ಯ ಮಾರ್ಗಗಳ ಮೂಲಕ ಆ ಅನುಭವಕ್ಕೆ ಪ್ರತಿಕ್ರಿಯಿಸುವ ನಿಟ್ಟಿನ ಪ್ರಾಥಮಿಕ ಉದ್ದೇಶದೊಂದಿಗೆ ಓದುವುದು.

**ಬಹಿರ್ಮುಖ (Efferent)**– ಜ್ಞಾನದ ಸಂವರ್ಧಿಸಿಕೊಳ್ಳಲು ಅಥವಾ ಪ್ರಶ್ನೆಗಳಿಗೆ ಉತ್ತರಿಸಲು, ವಿಷಯವನ್ನು ಪತ್ತೆಹಚ್ಚಲು, ನಿಜಾಂಶವನ್ನು ಮತ್ತು ಸಾರಾಂಶವನ್ನು ತಿಳಿಯಲು ಪಠ್ಯದಿಂದ ಮಾಹಿತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಓದುವುದು.

- ಸಂವಾದಾತ್ಮಕ ಓದು ಮತ್ತು ಆ ಮೂಲಕ ಜೋರಾಗಿ ಓದುವುದನ್ನು ಕೇಳಿಸಿಕೊಳ್ಳುವ ಅವಕಾಶಗಳು

- ಓದನ್ನು ಮತ್ತು ಪುಸ್ತಕಗಳನ್ನು ಹಂಚಿಕೊಳ್ಳುವ, ಪ್ರತಿಕ್ರಿಯಿಸುವ, ಚರ್ಚಿಸುವ ಅವಕಾಶ

● ವಿವಿಧ ಬಗೆಯ ಶೈಲಿಗಳು ಮತ್ತು ಪಠ್ಯ ಪ್ರಕಾರಗಳನ್ನು ಉದಾ; (1) ನಿರೂಪಣೆಗಳು (2) ಕವನಗಳು (3) ಮಾಹಿತಿ ಪುಸ್ತಕಗಳು ಮತ್ತು ಪಠ್ಯಗಳು (4) ಸೂಚನೆಗಳು (5) ವಿಭಿನ್ನ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸುವ ಅಥವಾ ಪ್ರತಿಪಾದಿಸುವ ಪಠ್ಯಗಳನ್ನು ಬಳಸುವ ಮತ್ತು ಅರ್ಥೈಸಿಕೊಳ್ಳುವ ಅವಕಾಶ

● ಸಂದೇಶಗಳು, ಪತ್ರಗಳು, ವೃತ್ತಪತ್ರಿಕೆಯ ತುಣುಕುಗಳು ಮತ್ತು ಜಾಹೀರಾತುಗಳು, ಆಮಂತ್ರಣಗಳು, ಭಿತ್ತಿಪತ್ರಗಳು, ಬಸ್ ಟಿಕೆಟ್‌ಗಳು, ಲೇಬಲ್‌ಗಳು ಮುಂತಾದ ವಿಶ್ವಸನೀಯ ವ್ಯಕ್ತ ಪಠ್ಯಗಳ ಪರಿಚಯ ಮತ್ತು ಬಳಕೆ.

● ಕೌಶಲಗಳನ್ನು ರೂಪಿಸಲು ವಿಷಯವಸ್ತುವನ್ನು ಓದುವ ಅವಕಾಶ. ಉದಾ. ಪ್ರಮುಖ ಪದಗಳು ಹಾಗೂ ವಿಚಾರಗಳ ಗುರುತಿಸುವಿಕೆ, ಪಠ್ಯದ ರೂಪರೇಷೆ ಹಾಗೂ ಸಾರಾಂಶದ ರಚನೆ.

● ಪಠ್ಯದ ವಸ್ತುವಿಷಯವನ್ನು ಪ್ರಶ್ನಿಸುವ, ಅಭಿಪ್ರಾಯಗಳನ್ನು ಹೇಳುವ ಅವಕಾಶಗಳ ಮೂಲಕ ವಿಚಾರಾತ್ಮಕ ಓದಿಗೆ ಬೆಂಬಲ ನೀಡುವುದು

● ಪುಸ್ತಕಗಳೊಂದಿಗೆ ಸಂತೋಷದಿಂದ ಮುಕ್ತವಾಗಿ ತೊಡಗಿಸಿಕೊಳ್ಳುವ ಅವಕಾಶ.

**ಕೋಷ್ಟಕ 1.** ಮುದ್ರಿತ ಸಾಮಗ್ರಿಗಳಿಂದ ಸಮೃದ್ಧಗೊಂಡ ತರಗತಿಗಾಗಿ ಸೂಚಿಸಿದ ಅಂಶಗಳು, ಅದಕ್ಕನುಗುಣವಾಗಿ, ಅವು ಬೆಂಬಲಿಸಬಹುದಾದ ಓದು ಮತ್ತು ಬರಹಕ್ಕೆ ಅಡಿಪಾಯವನ್ನು ಒದಗಿಸುವ ಕೌಶಲಗಳು ಮತ್ತು ಪ್ರವೃತ್ತಿಗಳು

| **ಮುದ್ರಿತ ಅಂಶಗಳು ಮತ್ತು/ಅಥವಾ ಮುದ್ರಿತ ಸಾಮಗ್ರಿಗಳಿಂದ ಕೂಡಿದ ತರಗತಿಯ ಚಟುವಟಿಕೆಗಳು** | **ಅದಕ್ಕನುಗುಣವಾದ ಓದು/ಬರಹವನ್ನು ಕುರಿತ ಮೂಲಭೂತ ಪರಿಕಲ್ಪನೆಗಳು, ಕೌಶಲಗಳು ಮತ್ತು ಪ್ರವೃತ್ತಿಗಳು.** |
|---|---|

| | |
|---|---|
| **ತರಗತಿಯೊಳಗಿನ ಸಂವಾದಗಳು ಇವುಗಳನ್ನು ಆಧರಿಸಿವೆ**: ತರಗತಿಯ ಪ್ರದರ್ಶನಗಳು, ಕವನಗಳು, ಪಠ್ಯಗಳು, ಚಿತ್ರಗಳು. | ಪ್ರದರ್ಶಿತವಾಗಿರುವವುಗಳನ್ನು ಆಧರಿಸಿದಂತೆ, ಆಡುಭಾಷೆಯನ್ನು ವಿವಿಧ ರೀತಿಯಲ್ಲಿ ಬಳಸುವುದು |
| ಮುಕ್ತ ಬರವಣಿಗೆ, ಚಿತ್ರದ ರಚನೆ ಮತ್ತು ನಟನೆಯ ಆಟದ ಚಟುವಟಿಕೆಗಳಿಗೆ ಅವಕಾಶ | **-ಚಿತ್ರದ ರಚನೆ ಮತ್ತು ಮುಕ್ತ ಬರವಣಿಗೆಯ ಮೂಲಕ ಸೃಜನಶೀಲ ಅಭಿವ್ಯಕ್ತಿ**<br>ನೈಜ ಅನುಭವಗಳ ಸಾಂಕೇತಿಕ ಅಭಿವ್ಯಕ್ತಿ, ಓದು ಬರಹದ ನಟನೆ, ನಾಟಕೀಕರಣ, ಕತೆ ಕಟ್ಟುವುದು, ಚಿತ್ರ ಬಿಡಿಸುವುದು ಮುಂತಾದವುಗಳನ್ನು ಒಳಗೊಳ್ಳುವುದು |
| ಲೇಬಲ್‌ಗಳು, ಸಮಾಚಾರ ಪತ್ರಿಕೆಗಳು, ಜಾಹೀರಾತುಗಳು ಮುಂತಾದ ವಿವಿಧ ಅಧಿಕೃತ ಪಠ್ಯಗಳನ್ನು ಪ್ರದರ್ಶಿಸುವುದು | **ಜ್ಞಾನದ ಮೂಲ ಮತ್ತು ಶಬ್ದಸಂಪತ್ತಿನ ಸೃಜನೆಯನ್ನು ಕುರಿತ ಆತ್ಮವಿಶ್ವಾಸದ ಪುಷ್ಟೀಕರಣ**<br>ಮುದ್ರಣವನ್ನು ವಿವಿಧ ಅರ್ಥಪೂರ್ಣ ಮತ್ತು ಸಂತೋಷದಾಯಕ ರೀತಿಯಲ್ಲಿ ಬಳಸಿ, ಹೆದರಿಕೆ ಹೋಗಲಾಡಿಸುವುದು |
| **ಓದುವಿಕೆ / ಪುಸ್ತಕ ವಲಯ**<br>ಪುಸ್ತಕಗಳು ಮತ್ತು ಮಕ್ಕಳ ಕಥೆಗಳು/ಬರಹಗಳು ರೇಖಾಚಿತ್ರಗಳನ್ನು ಪ್ರದರ್ಶಿಸುವುದು<br>ಅರ್ಥಪೂರ್ಣ ಓದುವಿಕೆಗಾಗಿ ಅನೌಪಚಾರಿಕ ಮತ್ತು ಹೆದರಿಕೆರಹಿತ ಅವಕಾಶಗಳು | ಪುಸ್ತಕಗಳು ಮತ್ತು ಕಥೆಗಳ ಆಸ್ವಾದ<br>ಪುಸ್ತಕಗಳನ್ನು ಕುರಿತ ಸಂವಾದ, ಕಥೆ ಹೇಳುವುದು, ಗಟ್ಟಿಯಾಗಿ ಓದುವುದು ಮತ್ತು ಪುಸ್ತಕಗಳೊಂದಿಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನ ಪ್ರೇರಣೆ |
| ಪ್ರದರ್ಶಿಸಿರುವ ಮುದ್ರಣವನ್ನು ಆಧರಿಸಿದ ಭಾಷೆಯ ಆಟಗಳು | **ಆಡುಭಾಷೆ ಮತ್ತು ಲಿಖಿತ ಭಾಷೆಯ ಜೊತೆ ವಿವಿಧ ರೀತಿಯಲ್ಲಿ ಸಂತೋಷದಾಯಕವಾಗಿ ತೊಡಗಿಸಿಕೊಳ್ಳುವುದು** |
| ಪದಗಳಿಂದ ತುಂಬಿದ ಗೋಡೆಗಳು | ಶಬ್ದೋಚ್ಚಾರದ ಸಂಸ್ಕರಣೆ, ಪದವನ್ನು ಗುರುತಿಸುವುದು ಮತ್ತು ಅರ್ಥದ ಸೃಜನೆಯನ್ನು ಪ್ರಾಸಪದಗಳು, ಪದವನ್ನು ಕುರಿತ ಚಟುವಟಿಕೆಗಳು ಮತ್ತು ಪದಗಳ ಆಟಗಳ ಮೂಲಕ ಬೆಂಬಲಿಸುವುದು |
| ಜೋರಾಗಿ ಓದಿ ಹೇಳುವ ಸೆಷನ್‌ಗಳಲ್ಲಿ, ಶಿಕ್ಷಕರು ಮಾದರಿಯಾಗಿರುವುದು ಮತ್ತು ಪ್ರಾತ್ಯಕ್ಷಿಕೆಯ ಪ್ರದರ್ಶನ | **ಮುದ್ರಣದ ಪರಿಕಲ್ಪನೆಗಳನ್ನು ರೂಪಿಸುವುದು ಅಥವಾ ಮುದ್ರಣದ ಮೂಲ ರೀತಿನೀತಿಗಳನ್ನು ಅರ್ಥಮಾಡಿಕೊಳ್ಳುವುದು -**<br>ಪುಸ್ತಕದ ನಿರ್ವಹಣೆ ಅಥವಾ ಪುಸ್ತಕದ ಪುಟದಲ್ಲಿ ಪದಗಳನ್ನು ಅನುಸರಿಸುವುದು ಹೇಗೆ ಎಂದು ತಿಳಿದುಕೊಳ್ಳುವುದು; ಪುಸ್ತಕದ ಶೀರ್ಷಿಕೆ, ಮುಖಪುಟ, ದಿಗ್ವಾಚಕಗಳು (directionality), ಎಡದಿಂದ ಬಲಕ್ಕೆ ಮತ್ತು ಮೇಲಿನಿಂದ ಕೆಳಕ್ಕೆ ಓದುವುದು; ದಿಕ್ ವಿನ್ಯಾಸ (orientation); 'ಪದಗಳ' ಪರಿಕಲ್ಪನೆ, ಪದಗಳ ನಡುವಿನ ಜಾಗ; ವಿರಾಮ ಚಿಹ್ನೆಯನ್ನು ಹಾಕುವ ವಿಧಾನ/ಉಚ್ಚಾರಣೆಯ ವಿಧಾನ; ಕ್ರಿಯಾತ್ಮಕತೆ; ಅರ್ಥಪೂರ್ಣತೆ. |
| ಲೇಬಲ್‌ಗಳನ್ನು ಅಂಟಿಸುವುದು, ಲಿಖಿತ ಸೂಚನೆಗಳು ಮತ್ತು ಚಿತ್ರ ಶೀರ್ಷಿಕೆಗಳು | ಮುದ್ರಣದ ಅರಿವನ್ನು ಹೆಚ್ಚಿಸುವುದು –<br>ಎಲ್ಲೆಲ್ಲೂ ಕಾಣುವ ಮುದ್ರಿತ ಅಕ್ಷರಗಳನ್ನು ಗಮನಿಸುವುದು; ವಿಭಿನ್ನ ಉದ್ದೇಶಗಳಿಗಾಗಿ ಅದನ್ನು ಹೇಗೆ ಅರ್ಥಪೂರ್ಣ ರೀತಿಯಲ್ಲಿ ಬಳಸಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು. ಈ ಅಂಶಗಳನ್ನು ಸಕ್ರಿಯವಾಗಿ ಬಳಸಲು ಸುಗಮಗೊಳಿಸುವುದು |
| ಹೆಸರು ಪ್ರದರ್ಶಿಸುವುದು ಅಥವಾ ಹಾಜರಾತಿ ಪಟ್ಟಿ | **ಅಕ್ಷರಗಳ ಹೆಸರಿಸುವಿಕೆ** - ಅಕ್ಷರಗಳು ಹೆಸರುಗಳನ್ನು ಹೊಂದಿದ್ದು, ಆಕಾರಗಳು ಮತ್ತು ಶಬ್ದಗಳಲ್ಲಿ ಪರಸ್ಪರ ಭಿನ್ನವಾಗಿವೆ ಎಂಬ ಅರಿವು ಮೂಡಿಸುವುದು<br>ವರ್ಣಮಾಲೆಯ ಆಟಗಳು, ವರ್ಗೀಕರಣ ಚಟುವಟಿಕೆಗಳು, ಇತ್ಯಾದಿ. |

| | |
|---|---|
| ಕಪ್ಪುಹಲಗೆ ಮತ್ತು ನಕ್ಷೆಗಳು<br>(ಬೋರ್ಡ್ ಮತ್ತು ಚಾರ್ಟ್‌ಗಳು) | **ಲಿಖಿತ ನಿರ್ದೇಶನಗಳನ್ನು ಅನುಸರಿಸಿದ ಓದು ಮತ್ತು ನಿರ್ವಹಣೆ-** ಹವಾಮಾನ ಪಟ್ಟಿಯಲ್ಲಿನ ಚಟುವಟಿಕೆಗಳು, ಮಕ್ಕಳು ಮಾಡಿದ ಕ್ಯಾಲೆಂಡರ್‌ಗಳು, ಇತ್ಯಾದಿ. |
| ಮಕ್ಕಳ ಕೆಲಸವನ್ನು ಪ್ರದರ್ಶಿಸುವುದು | **ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಸ್ವಂತಿಕೆಯನ್ನು ಬೆಂಬಲಿಸುವುದು** - ಇದರಿಂದ ಮಕ್ಕಳು ಆತ್ಮವಿಶ್ವಾಸವನ್ನು ಹೊಂದುತ್ತಾರೆ, ಶ್ರಮಪಡಲು ಸಿದ್ಧರಾಗುತ್ತಾರೆ ಮತ್ತು ಹೊಸ ವಿಷಯಗಳನ್ನು ಕಲಿಯಲು ಉತ್ಸುಕರಾಗುತ್ತಾರೆ |
| ಓದು ಬರಹವನ್ನು ಬಳಸುವ ವಿವಿಧ ರೀತಿಗಳ ಪ್ರದರ್ಶನ ಮತ್ತು ಶಿಕ್ಷಕರು ಮಾದರಿಯಾಗಿರುವುದು | **ಓದು ಮತ್ತು ಬರಹವನ್ನು ಬಳಸುವ ವಿವಿಧ ಅರ್ಥಪೂರ್ಣ ವಿಧಾನಗಳಿಗೆ ಒಡ್ಡಿಕೊಳ್ಳುವುದು** |

**ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಪಠ್ಯದ ವಿಷಯವನ್ನು ಪ್ರಶ್ನಿಸಲು ಪರ್ಯಾಲೋಚನಾತ್ಮಕ ಓದಿಗೆ ಪ್ರೋತ್ಸಾಹಿಸುವುದು.**

**ಪುಸ್ತಕಗಳೊಂದಿಗೆ ಮುಕ್ತವಾಗಿ, ಸಂತೋಷವಾಗಿ ತೊಡಗಿಕೊಳ್ಳುವ ಅವಕಾಶ ನೀಡುವುದು.**

**2) ಧ್ವನಿವಿಜ್ಞಾನಕ್ಕೆ ಸಂಬಂಧಿಸಿದ ಸಂಸ್ಕರಣೆ ಮತ್ತು ಅರ್ಥನಿಷ್ಪತ್ತಿಗಾಗಿ ಸಾಕ್ಷರತೆಯ ಮೂಲ ಕೌಶಲಗಳನ್ನು ರೂಪಿಸುವುದು**

ಮುದ್ರಿತ ಸಾಮಗ್ರಿಗಳಿಂದ ಕೂಡಿದ ವಾತಾವರಣಕ್ಕೆ ತೆರೆದುಕೊಳ್ಳುವುದರ (exposure) ಜೊತೆಗೆ, ಲಿಪಿಯ ಜ್ಞಾನ ಮತ್ತು ಪ್ರಮುಖ ಸಾಕ್ಷರತಾ ಕೌಶಲಗಳನ್ನು ಬೆಳೆಸಲು ಮಕ್ಕಳನ್ನು ಸಂರಚಿತ (structured) ಅವಕಾಶಗಳಿಗೆ ಒಡ್ಡುವುದು ಬಹಳ ಮುಖ್ಯ. ಇದು ಉದ್ದೇಶಪೂರ್ವಕವೂ ಮತ್ತು ಅರ್ಥಪೂರ್ಣವೂ ಆಗಿರಬೇಕು. ಸ್ಪಷ್ಟವಾಗಿ ಗಮನಹರಿಸಬೇಕಾದ ಕೆಲವು ಮೂಲ ಸಾಕ್ಷರತಾ ಕೌಶಲಗಳು[1]:

1. *ಧ್ವನಿಮಾಗಳ ಅರಿವು*- ಇದು, ಮಾತನಾಡುವಾಗ ಬಳಸುವ ಪದಗಳಲ್ಲಿರುವ ಪ್ರತ್ಯೇಕ ಶಬ್ದಗಳನ್ನು ಗಮನಿಸುವ, ಆ ಕುರಿತ ಚಿಂತನೆಯನ್ನು ಕೈಗೊಳ್ಳುವ ಮತ್ತು ಅದರೊಂದಿಗೆ ಕೆಲಸವನ್ನು ನಿರ್ವಹಿಸುವ ಸಾಮರ್ಥ್ಯ. ಮಕ್ಕಳು ಮಾತಿನ ಶಬ್ದಗಳ ಹರಿವನ್ನು ಕೇಳಿಸಿಕೊಂಡರೂ ಅವರಿಗೆ ಪದಗಳ ಪೃಥಕ್ಕರಣೆಯ ಅರಿವಿರುವುದಿಲ್ಲ ಎಂದು ಸಂಶೋಧನೆ ಸೂಚಿಸುತ್ತದೆ. ಅವರು ಆಡುಭಾಷೆಯಲ್ಲಿರುವ ದೊಡ್ಡದೊಡ್ಡ ಘಟಕಗಳಾದ ಅಕ್ಷರ ಮತ್ತು ಪದಗಳನ್ನು ಗುರುತಿಸುವುದನ್ನು ಕಲಿಯುವ ಅಗತ್ಯವಿದೆ. ಅವರಿಗೆ ಪದಗಳು; ಮಾತನಾಡುವಾಗಿನ ಧ್ವನಿಗಳು ಅಥವಾ ಧ್ವನಿಮಾಗಳಿಂದ ರೂಪುಗೊಂಡಿವೆ ಎಂದು ಅರ್ಥಮಾಡಿಕೊಳ್ಳಲು ವಿಶೇಷ ಚಟುವಟಿಕೆಗಳ ಅಗತ್ಯವಿದೆ.

2. *ಧ್ವನಿವಿಜ್ಞಾನ*- ಇದು ಲಿಖಿತ ಅಕ್ಷರದ ಆಕಾರಗಳು (ಚಿಹ್ನೆಗಳು) ಮತ್ತು ಅವುಗಳ ಉಚ್ಚಾರಿತ ಶಬ್ದಗಳ (ಧ್ವನಿಮಾಗಳ) ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಧ್ವನಿಮಾದ ಅರಿವಿನೊಂದಿಗೆ, ಮಕ್ಕಳಿಗೆ ಶಬ್ದವನ್ನು ಅರ್ಥಮಾಡಿಕೊಳ್ಳಲು, ಅಂದರೆ, ಲಿಖಿತ ವರ್ಣಮಾಲೆಗಳ ಮತ್ತು ಅಕ್ಷರಗಳ ಉಚ್ಚಾರಗಳ ನಡುವಿನ ಸಾಂಕೇತಿಕ ಸಾದೃಶ್ಯವನ್ನು ಗ್ರಹಿಸಲು ಸಹಾಯಮಾಡುವಂತಹ ವಿಶೇಷ ಚಟುವಟಿಕೆಗಳು ಬೇಕಾಗುತ್ತವೆ, ಧ್ವನಿ ವಿಜ್ಞಾನವು ಚೆನ್ನಾಗಿ ಓದಲು ಮತ್ತು ಉಚ್ಚರಿಸಲು ಬಳಸುವುದು ಹೇಗೆ ಎಂಬ ಜ್ಞಾನವನ್ನು ಸಹ ಧ್ವನಿವಿಜ್ಞಾನವು ಮಕ್ಕಳಿಗೆ ಕಲಿಸುತ್ತದೆ.

ಲಿಖಿತ ಪದಗಳನ್ನು ಗುರುತಿಸಲು ಮೇಲೆ ತಿಳಿಸಲಾದ ಎರಡೂ ಕೌಶಲಗಳು ಅಗತ್ಯವಾಗಿವೆ

3. *ಪದವನ್ನು ಗುರುತಿಸುವುದು ಮತ್ತು ಶಬ್ದಸಂಪತ್ತು* - ಇದು ಪದಗಳನ್ನು ಗುರುತಿಸುವ, ಅರ್ಥಮಾಡಿಕೊಳ್ಳುವ ಮತ್ತು ತನ್ನದೇ ಸ್ವಂತ ಪದಗಳನ್ನು ರಚಿಸುವ ಮಗುವಿನ ಸಾಮರ್ಥ್ಯವನ್ನು ಸೂಚಿಸುತ್ತದೆ. ಶಬ್ದಬಾಹುಳ್ಯವು ಮಕ್ಕಳಿಗೆ ಅರ್ಥಮಾಡಿಕೊಂಡು ಓದಿ ಬರೆಯಲು ಸಹಾಯಮಾಡುವುದರೊಂದಿಗೆ ಬರಹದ ಮೂಲಕ ಉತ್ತಮವಾಗಿ ಅಭಿವ್ಯಕ್ತಿಸಲು ಸಹಾಯಮಾಡುತ್ತದೆ.

4. ಅರ್ಥಗ್ರಹಿಕೆ - ಇದು ಅರ್ಥಮಾಡಿಕೊಂಡು ಓದಿ ಬರೆಯುವ ಮಗುವಿನ ಸಾಮರ್ಥ್ಯವನ್ನು ಸೂಚಿಸುತ್ತದೆ. ಓದುವುದು ಸಕ್ರಿಯ ಚಟುವಟಿಕೆಯಾಗಿದೆ. ಉತ್ತಮ ಓದುಗರು ವಿವಿಧ ತಂತ್ರಗಳನ್ನು ಬಳಸಿ ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗುತ್ತಾರೆ. ಓದುವಿಕೆಯನ್ನು ಅಧ್ಯಯನಮಾಡುವ ಸಂಶೋಧಕರು ಮಕ್ಕಳಿಗೆ ಕಲಿಸಬಹುದಾದ ವಿವಿಧ ಅರ್ಥಗ್ರಹಿಕೆಯ ತಂತ್ರಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಅರ್ಥದೊಂದಿಗೆ ಓದಿ ಬರೆಯಲು ಮತ್ತು ಮಕ್ಕಳು ಯಶಸ್ವಿ ಸ್ವತಂತ್ರ ಓದುಗರಾಗಲು ಸಹಾಯಮಾಡುತ್ತದೆ.

5. *ನಿರರ್ಗಳತೆ* - ಇದು ನಿಖರವಾಗಿ, ತ್ವರಿತವಾಗಿ ಮತ್ತು ತಡೆಯಿಲ್ಲದೆ ಓದಿ ಬರೆಯುವ ಸಾಮರ್ಥ್ಯವಾಗಿದೆ. ನಿರರ್ಗಳವಾಗಿ ಓದುವುದಕ್ಕೆ ಸಮರ್ಥವಾಗಿ ಪದವನ್ನು ಗುರುತಿಸುವ ಮತ್ತು ಆ ಪದಗಳಿಂದ ಅರ್ಥನಿಷ್ಪತ್ತಿ ಮಾಡುವ ಕೌಶಲಗಳು ಬೇಕಾಗುತ್ತವೆ. ಇದು ಓದುವ ಪ್ರಕ್ರಿಯೆಗೆ ವೇಗವನ್ನು ಮತ್ತು ನಿರರ್ಗಳತೆಯನ್ನು ತರುತ್ತದೆ. ಸ್ವಂತವಾಗಿ ಓದಿದ್ದನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ನಿರರ್ಗಳವಾಗಿ ಓದುವವರು ಲೀಲಾಜಾಲವಾಗಿ, ಅಭಿವ್ಯಕ್ತಿಪೂರ್ಣವಾಗಿ ಅರ್ಥಪೂರ್ಣವಾಗಿ ಓದಬಲ್ಲವರಾಗುತ್ತಾರೆ.

**ಶಿಕ್ಷಕರ/ಸುಗಮಕಾರರ ಪಾತ್ರ**

ಮಕ್ಕಳ ಸ್ವಾಭಾವಿಕ ಕಲಿಕೆಯ ಪ್ರಕ್ರಿಯೆಗಳು, ಅವರ ಕುಟುಂಬದ ಹಿನ್ನೆಲೆಗಳು ಮತ್ತು ಅವರ ವೈಯಕ್ತಿಕ ಭಿನ್ನತೆಗಳ ಬಗ್ಗೆ ಶಿಕ್ಷಕರು ಸಂವೇದನಾಶೀಲರಾಗಿರುವುದು ಮುಖ್ಯ. ಈ ಕ್ಷೇತ್ರಗಳನ್ನು ಕುರಿತ ಅರಿವು ಮಕ್ಕಳನ್ನು ಓದಿ, ಬರೆಯಲು ತೊಡಗಿಸುವಲ್ಲಿ ಅರ್ಥಪೂರ್ಣ ಮತ್ತು ಉದ್ದೇಶಪೂರ್ವಕ ಮಾರ್ಗಗಳನ್ನು ಬೆಳೆಸಲು ಶಿಕ್ಷಕರಿಗೆ ಸಹಾಯಮಾಡುತ್ತದೆ.

ಇದಕ್ಕಾಗಿ ಶಿಕ್ಷಕರು ಈ ಕೆಳಗಿನ ಅಂಶಗಳಿಗೆ ಸಂವೇದನಾತ್ಮಕವಾಗಿ ಸಿದ್ಧರಾಗಿರಬೇಕು:

- ಯಾವುದೇ ಅರ್ಥಪೂರ್ಣವಾದ ಕಲಿಕೆಗೆ, ವಿಶ್ವಾಸ ಮತ್ತು ಪರಸ್ಪರ ಗೌರವಯುತ ಸಂಬಂಧವು ನಿರ್ಣಾಯಕ ಘಟಕವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

- ಮಕ್ಕಳ ವಿಷಯದಲ್ಲಿ ಸೂಕ್ಷ್ಮವಾಗಿರಬೇಕು, ಮಕ್ಕಳೊಂದಿಗಿನ ತನ್ನ ವರ್ತನೆಯ ಕುರಿತು ಪರ್ಯಾಲೋಚಿಸಬಲ್ಲವರಾಗಿರಬೇಕು.

- ತರಗತಿಯಲ್ಲಿನ ವೈವಿಧ್ಯತೆಯೊಂದಿಗೆ ತೊಡಗಬಲ್ಲವರಾಗಬೇಕು, ಕಲಿಯುವವರು ಮತ್ತು ಅವರ ಪೋಷಕರ ನಡುವಿನ ವೈಯಕ್ತಿಕ ವ್ಯತ್ಯಾಸಗಳನ್ನು ಗೌರವಿಸಬಲ್ಲವರಾಗಬೇಕುಮತ್ತು ಒಗ್ಗೂಡಿ ಕಲಿಯುವ ವಾತಾವರಣವನ್ನು ನಿರ್ಮಿಸಬೇಕು.

- ಮಕ್ಕಳು, ಅವರ ಭಾಷೆ ಮತ್ತು ಅವರ ಅಕ್ಷರ ಕಲಿಕೆಯ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡು, ನೀಡಲಾದ ವಿಷಯವನ್ನು ಯಾಂತ್ರಿಕವಾಗಿ ಕಾರ್ಯಗತಗೊಳಿಸದೆ ಅಗತ್ಯ ಉಪಕ್ರಮವನ್ನು ಕೈಗೊಳ್ಳಬಲ್ಲವರಾಗಬೇಕು.

• ಪರಿಣಾಮಕಾರಿಯಾಗಿ, ಜೋಪಾನವಾಗಿ ಮತ್ತು ಅಷ್ಟೇ ದೃಢವಾಗಿ ಚಿಕ್ಕ ಮಕ್ಕಳನ್ನು ನಿರ್ವಹಿಸುವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು.

- ವಿವಿಧ ಬಗೆಯ ಓದು-ಬರಹದ ಮಾದರಿಗಳನ್ನು ತೋರಿಸಿಕೊಡಬಲ್ಲ ಸಾಮರ್ಥ್ಯ.

**ಉಪಸಂಹಾರ**

ಮೇಲೆ ಪ್ರಸ್ತುತಪಡಿಸಿದ ಸಮತೋಲಿತ ಮತ್ತು ಸಾಮಾಜಿಕವಾಗಿ ಸೂಕ್ಷ್ಮವೆನಿಸಿದ ಪರಿಕಲ್ಪನಾತ್ಮಕ ಚೌಕಟ್ಟು, ವೈವಿಧ್ಯಮಯ ಮುದ್ರಣ ಆಧಾರಿತ ಓದುವಿಕೆ ಮತ್ತು ಬರವಣಿಗೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮತ್ತು ಉದ್ದೇಶಪೂರ್ವಕವಾಗಿ ತೊಡಗಿಸಿಕೊಳ್ಳುವ ಅನೇಕ ಅವಕಾಶಗಳೊಂದಿಗೆ, ಮಕ್ಕಳಿಗೆ ಪುಸ್ತಕಗಳೊಂದಿಗೆ ಅರ್ಥಪೂರ್ಣ, ಸಾಮಾಜಿಕ ಒಳಗೊಳ್ಳುವಿಕೆಯ ಅವಶ್ಯಕತೆಯಿದೆ ಎಂಬ ನಿಲುವನ್ನು ಹೊಂದಿದೆ. ಇದಲ್ಲದೆ, ಹೆಚ್ಚಿನ ಮಕ್ಕಳಿಗೆ ಕೆಲವು ಸ್ಪಷ್ಟ, ಬೆಳವಣಿಗೆಗೆ ಸೂಕ್ತವಾದ ಕಲಿಕೆಯ ಅವಕಾಶ/ ಧ್ವನಿವಿಜ್ಞಾನದ ಅರಿವನ್ನು ಕುರಿತ ಶಿಕ್ಷಣ, ವರ್ಣಮಾಲೆಯ ಜ್ಞಾನ; ಶಬ್ದಸಂಪತ್ತು ಮತ್ತು ಅರ್ಥಗ್ರಹಿಕೆಯ ತಂತ್ರಗಳು ಅವಶ್ಯಕ. ಈ ಕೌಶಲಗಳ ಸ್ಪಷ್ಟ ಬೋಧನೆಯನ್ನು ಅರ್ಥಪೂರ್ಣ ಮತ್ತು ಆಸಕ್ತಿದಾಯಕ ರೀತಿಯಲ್ಲಿ ಒದಗಿಸುವುದು ಮುಖ್ಯ. ಇದು ಮಕ್ಕಳನ್ನು ನಿರುತ್ಸಾಹ, ಅರ್ಥರಾಹಿತ್ಯ ಮತ್ತು ಯಾಂತ್ರಿಕತೆಗೆ ಒಳಪಡಿಸದೆ, ಅವರಲ್ಲಿ ಸಾಕ್ಷರತೆಯನ್ನು ಹೆಚ್ಚಿಸಲು ಸಹಾಯಮಾಡುತ್ತದೆ.

[1] ಓದುವ ಮತ್ತು ಬರೆಯುವ ಕ್ರಿಯೆಯನ್ನು ಕುರಿತ ಸಮತೋಲಿತ ಅನುಸಂಧಾನವು ಸಂಶೋಧನೆಯ ವಿಸ್ತೃತ ಮತ್ತು ವಾಸ್ತವಿಕ ವಿಮರ್ಶೆಯ ನಂತರ ರೂಪುಗೊಂಡದ್ದು. ಹೆಚ್ಚಿನ ವಿವರಗಳಿಗೆ ನೋಡಿ: *National Reading Panel, National Insti-tute of Child Health and Human Development, U.S. Department of Health and Human Services (2000): Teaching Children to Read: An Evidence-Based Assessment of the Scientific Research Literature on Reading and its Implications for Reading Instruc-tion. http://www.nichd.nih.gov/publications/nrp/ smallbook.htm*

**ಪರಾಮರ್ಶನೆಗಳು:**


Government of India. (1993). *Yashpal Committee Report: Learning without burden*. New Delhi, India: Ministry of Human Resource Development.

Govinda, R. (2007). Reorienting elementary education. *Seminar*, 574. Retreived from http:// www.india-seminar.com/semsearch.htm

Teale, W.H. & Sulzby, E. (Eds.). (1986). *Emergent literacy: Writing and reading*, Norwood, NJ: Ablex.

Vygotsky, L.S. (1978). *Mind and society: The development of higher mental processes*. M. Cole, V. John-Steiner, S. Scribner & E. Souberman (Eds.). Cambridge, MA: Harvard University Press.

Wells, G. (2003). *Children talk their way into literacy*. Retrieved from http:// people.ucsc.edu/~gwells/Files/Papers_Folder/ Talk-Literacy.pdf



ಕೀರ್ತಿ ಜಯರಾಮ್, ನಿರ್ದೇಶಕರು, ಆರಂಭಿಕ ಸಾಕ್ಷರತಾ ಯೋಜನೆ (ಇಎಲ್), ಆರಂಭಿಕ ಸಾಕ್ಷರತೆ ಪ್ರೋತ್ಸಾಹಕ ಸಂಸ್ಥೆ (ಒಇಎಲ್‌ಪಿ), ನವದೆಹಲಿ- 110 070

*keerti_jayaram@yahoo.com*


ಆದ್ದರಿಂದ ಶಿಕ್ಷಕರ ಕಾರ್ಯ ಏನೆಂಬುದು ಸ್ಪಷ್ಟವಾಗಿದೆ: ಒಂದೇ ನೋಟದಲ್ಲಿ ಹಲವಾರು ಪದಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಮತ್ತು ಏನನ್ನಾದರೂ ಓದಲು ಎರಡನೆಯ ಬಾರಿಗೆ ಪುನಃ ಹಿಂದಕ್ಕೆ ಹೋಗಿ ಓದುವ ಅಗತ್ಯವನ್ನು ಹೋಗಲಾಡಿಸುವುದು. ಪದಗಳ ಮೇಲೆ ಬೆರಳಿಟ್ಟು, ವರ್ಣದಿಂದ ವರ್ಣ, ಅಥವಾ ಅಕ್ಷರದಿಂದ ಅಕ್ಷರ, ಅಥವಾ ಪದದಿಂದ ಪದ ಹೀಗೆ ಪ್ರತಿಯೊಂದನ್ನು ಎಚ್ಚರಿಕೆಯಿಂದ ಒಂದರ ಪಕ್ಕ ಒಂದರಂತೆ ಜೋಡಿಸುತ್ತ, ಓದುವುದು ತಪ್ಪು ಎಂಬುದನ್ನು ಇದು ತೋರಿಸುತ್ತದೆ. ಅಂತಹ ವಿಧಾನವು ವಿದ್ಯಾರ್ಥಿಗಳ ಕಣ್ಣನ್ನು ಬಹಳ ಕಡಿಮೆ ಜಿಗಿತಕ್ಕೆ ಒಳಪಡಿಸುವ ಕಾರಣ, ಅದು ತಪ್ಪು.. ದೀರ್ಘಜಿಗಿತಕ್ಕೆ ತರಬೇತಿ ನೀಡುವುದು ಉಪಾಧ್ಯಾಯರ ಉದ್ದೇಶವಾಗಿದೆ. ಅಲ್ಲದೆ, ಯಾವುದೇ ಅರ್ಥ ಅಥವಾ ವಿವೇಕವನ್ನು ಒದಗಿಸಲು ಬಹಳ ಕಡಿಮೆ ಜಿಗಿತವು ಹೆಚ್ಚು ಶ್ರಮದಾಯಕವಾದುದು. ವಿದ್ಯಾರ್ಥಿಯು ಎರಡು ಅಥವಾ ಮೂರು ಪದಗಳನ್ನು ಓದಿ ಗ್ರಹಿಸಲು ಪ್ರತ್ಯೇಕವಾಗಿ ಹೆಣಗಾಡಿದ ನಂತರ, ಇಡೀ ವಾಕ್ಯದ ಅರ್ಥವನ್ನು ಅರ್ಥಮಾಡಿಕೊಳ್ಳಲು ಅವುಗಳನ್ನು ಮತ್ತೊಮ್ಮೆ ಸಮಗ್ರವಾಗಿ, ಒಂದು ಸಮೂಹವೆಂಬ ನಿಟ್ಟಿನಲ್ಲಿ ಅವಲೋಕಿಸಬೇಕಾಗುತ್ತದೆ.